ರಾಜ್ಯದಲ್ಲಿ ಕನ್ನಡ ಮಾತೃಭಾಷೆ ಪ್ರಾಥಮಿಕ ಶಾಲೆಗಳಿಗೆ ಪ್ರೋತ್ಸಾಹ ನೀಡುವುದದು

2511(3361) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಆಡಳಿತ ಭಾಷೆ ಕನ್ನಡವಾಗಿರುವ ಕನ್ನಡ ಮಾತೃಭಾಷೆಯ ಪ್ರಾಥಮಿಕ ಶಾಲೆಗಳಿಗೆ ಸರ್ಕಾರ ಪ್ರೋತ್ಸಾಹಿಸಬೇಕಾಗಿರುವುದು ಸರ್ಕಾರದ ಆದ್ಯ ಕರ್ತವ್ಯವಲ್ಲವೇ?

ಆ) ಹಾಗಾದರೆ ಕನ್ನಡ ಪ್ರಾಥಮಿಕ ಶಾಲೆ ನಡೆಸುವ ಶಿಕ್ಷಣ ಸಂಸ್ಥೆಗಳು ನಿವೇಶನಗಳನ್ನು ಪಡೆದಿದ್ದರೆ ಶಾಲೆ ಕೊಠಡಿಗಳನ್ನು ಕಟ್ಟಿಸಲು ಸರ್ಕಾರವು ನೇರವು ನೀಡುವುದೇ?

ಇ) ಈ ಸೌಲಭ್ಯ ಕಲ್ಪಿಸುವುದರಿಂದ ಆಂಗ್ಲ ಮಾಧ್ಯಮ ಶಾಲೆಗಳಿಗೆ ಕಡಿವಾಣ ಹಾಕುವುದು ಸರ್ಕಾರದ ನೀತಿಯಾಗಬೇಕಲ್ಲವೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಹೌದು.

ಆ) ಖಾಸಗಿ ಸಂಸ್ಥೆಗಳ ಶಾಲಾ ಕಟ್ಟಡ ನಿರ್ಮಾಣ ಆಯಾ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.

ಇ) ಉದ್ಭವಿಸುವುದಿಲ್ಲ.

ಧಾರವಾಡ ನಗರದಲ್ಲಿ ಬಿ.ಇ.ಓ. ಅಧಿಕಾರಿ ವಲಯ ಸ್ಥಾಪನೆ

2512(3363) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಧಾರವಾಡ ನಗರದಲ್ಲಿ ಮೂರು ಬಿ.ಇ.ಓ. ಅಧಿಕಾರಿಗಳಿರುವುದು ನಿಜವೇ? ಹಾಗಾದರೆ ಒಬ್ಬರ ಆಡಳಿತದಲ್ಲಿ ಬರುವಂತೆ ಧಾರವಾಡ ಹುಬ್ಬಳಿಗೆ ಒಬ್ಬ ಬಿ.ಇ.ಓ. ಅಧಿಕಾರಿಯ ವಲಯ ಸ್ಥಾಪನೆಗೆ ಇರುವ ತೊಂದರೆ ಏನು;

ಆ. ಧಾರವಾಡ ನಗರ ಮತಕ್ಷೇತ್ರದಲ್ಲಿ ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಕೊಠಡಿಗಳು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ